# ಬಗೆಹರಿಯದ ಪ್ರಶ್ನೆಗಳ ‘ಪೌರತ್ವ ಮಸೂದೆ’

5



ತೀವ್ರ ವಿವಾದಿತ ‘ಪೌರತ್ವ (ತಿದ್ದುಪಡಿ) ಮಸೂದೆ’ಗೆ (ಸಿಎಬಿ) ಸಂಸತ್ತಿನ ಉಭಯ ಸದನಗಳ ಅಂಕಿತ ಪಡೆಯುವಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಯಶಸ್ವಿಯಾಗಿದೆ. ಇದರಿಂದ, ಈ ಮಸೂದೆಯೊಟ್ಟಿಗೆ ತಳಕು ಹಾಕಿಕೊಂಡಿರುವ ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಯೋಜನೆ ಜಾರಿಗೂ ಬಲ ಬಂದಂತಾಗಿದೆ. ದೇಶ ವಿಭಜನೆಯ ಕಾಲದಿಂದಲೂ ಜನರಲ್ಲಿ ಗುಪ್ತಗಾಮಿನಿಯಾಗಿದ್ದ ಧರ್ಮದ ಚೌಕಟ್ಟುಗಳಾಚೆಗಿನ ದ್ವಂದ್ವಗಳಿಗೆ, ಜಿಜ್ಞಾಸೆಗಳಿಗೆ ಈಗ ಅಧಿಕೃತ ರಾಜಕೀಯ ಕಿಡಿ ಹೊತ್ತಿದಂತಾಗಿದ್ದು, ಸಮಸ್ಯೆಗಳು ಪರಿಹಾರ ಕಾಣುವ ಬದಲು ಇನ್ನಷ್ಟು ಜಟಿಲಗೊಳ್ಳುವ ಲಕ್ಷಣಗಳೇ ಗೋಚರಿಸುತ್ತಿವೆ. ವಿಶಾಲವಾದ ಧಾರ್ಮಿಕ, ಸಾಮಾಜಿಕ ಮೌಲ್ಯಗಳ ತಳಹದಿಯ ಮೇಲೆ ನಿಂತಿರುವ ಭಾರತದ ಅಸ್ಮಿತೆಗೇ ಸವಾಲೊಡ್ಡುವಂತಿರುವ ಸಿಎಬಿಯು ಅದರ ಪರ–ವಿರೋಧಿಗಳ ನಡುವಿನ ಕಂದಕದ ಅಂತರವನ್ನು ಮತ್ತಷ್ಟು ಹೆಚ್ಚಿಸಿದೆ. ಏಕೆಂದರೆ, ವಲಸೆ ಸಮಸ್ಯೆಯೇ ಅಷ್ಟೊಂದು ಸಂಕೀರ್ಣವಾದದ್ದು. ಅದರಲ್ಲಿ ದೇಶದ ಭದ್ರತೆ, ಜನರ ಭಾವನಾತ್ಮಕತೆಯಂತಹ ನಾನಾ ಸೂಕ್ಷ್ಮ ವಿಷಯಗಳು ಅಡಕವಾಗಿರುತ್ತವೆ. ಅಸ್ಸಾಂನಲ್ಲಿ ಸಿದ್ಧಪಡಿಸಿದ ಎನ್‌ಆರ್‌ಸಿ ಪಟ್ಟಿಯಿಂದ ಹೊರಗುಳಿದಿರುವ 19 ಲಕ್ಷ ಜನರ ಭವಿಷ್ಯದ ಪ್ರಶ್ನೆಗೇ ಇನ್ನೂ ಉತ್ತರ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಹೀಗಿರುವಾಗ, ಈ ಯೋಜನೆಯನ್ನು ದೇಶದಾದ್ಯಂತ ಜಾರಿಗೊಳಿಸುವ ಔಚಿತ್ಯವಾದರೂ ಏನು ಎಂಬ ಪ್ರಶ್ನೆಯೂ ಎದುರಾಗಿದೆ.

ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಘಾನಿಸ್ತಾನದಿಂದ ಧಾರ್ಮಿಕ ಕಿರುಕುಳ ಅನುಭವಿಸಿ, 2014ರ ಡಿಸೆಂಬರ್ 31ಕ್ಕೂ ಮೊದಲು ಭಾರತಕ್ಕೆ ವಲಸೆ ಬಂದಿರುವ ಹಿಂದೂ, ಸಿಖ್, ಬೌದ್ಧ, ಜೈನ, ಪಾರ್ಸಿ, ಕ್ರೈಸ್ತ ಸಮುದಾಯದವರಿಗೆ ಪೌರತ್ವ ನೀಡುವುದೇ ಈ ಮಸೂದೆಯ ಪ್ರಮುಖ ಉದ್ದೇಶ ಎಂದು ಸರ್ಕಾರ ಪ್ರತಿಪಾದಿಸುತ್ತಿದೆ. ಇದರಲ್ಲಿ ಮುಸ್ಲಿಮರನ್ನು ಹೊರತುಪಡಿಸಲಾಗಿದೆ. ಸಮಸ್ಯೆಯ ಮೂಲ ಇರುವುದೇ ಇಲ್ಲಿ. 'ಪಾಕಿಸ್ತಾನದಲ್ಲಿ ಧರ್ಮದ ಕಾರಣಕ್ಕೆ ಕಿರುಕುಳ ಅನುಭವಿಸುವ ಅಹಮದೀಯ ಮತ್ತು ಶಿಯಾ ಪಂಗಡದವರಿಗಾಗಲೀ ಮ್ಯಾನ್ಮಾರ್‌ನ ರೋಹಿಂಗ್ಯಾ ಮುಸ್ಲಿಮರಿಗಾಗಲೀ ಇದು ಅನ್ವಯವಾಗದೇ ಇರುವುದು ಎಷ್ಟು ಸರಿ? ಇದು, ದೇಶದ ಧಮನಿರಪೇಕ್ಷ ಸಿದ್ಧಾಂತಕ್ಕೆ, ಸಮಾನತೆಯನ್ನು ಪ್ರತಿಪಾದಿಸುವ ಸಂವಿಧಾನಕ್ಕೆ ಎಸಗುವ ದ್ರೋಹವಲ್ಲವೇ? ಭಾಷೆ ಹಾಗೂ ಜನಾಂಗೀಯ ತಾರತಮ್ಯಕ್ಕೆ ಗುರಿಯಾಗಿರುವ ಶ್ರೀಲಂಕಾ ತಮಿಳರನ್ನೂ ಇದರಲ್ಲಿ ಪರಿಗಣಿಸಬಾರದೇಕೆ? ದೇಶ ವಿಭಜನೆಗೆ ಮುನ್ನ ಪಾಕಿಸ್ತಾನ ಮತ್ತು ಬಾಂಗ್ಲಾವು ಭಾರತದ ಭಾಗವೇ ಆಗಿದ್ದುದರಿಂದ, ಅಲ್ಲಿನ ಅಲ್ಪಸಂಖ್ಯಾತರ ಹಿತ ಕಾಯುವುದು ದೇಶದ ನೈತಿಕ ಹೊಣೆಗಾರಿಕೆ ಎಂದುಕೊಂಡರೂ ಅಫ್ಘಾನಿಸ್ತಾನವನ್ನು ಈ ಪಟ್ಟಿಯಲ್ಲಿ ಸೇರಿಸಿದ್ದೇಕೆ' ಎಂಬಂಥ ಪ್ರಶ್ನೆಗಳು ವಿರೋಧ ಪಕ್ಷಗಳಲ್ಲಿ ಮಾತ್ರವಲ್ಲ, ಪ್ರಜ್ಞಾವಂತ ನಾಗರಿಕರಲ್ಲೂ ಮೂಡಿವೆ. ಈ ಪ್ರಶ್ನೆಗಳಿಗೆ ಸಮಂಜಸ ಉತ್ತರ ನೀಡಿ, ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾದ ಸರ್ಕಾರ, ಸರ್ವಾಧಿಕಾರಿಯಂತೆ ವರ್ತಿಸುತ್ತಿರುವುದು ಉರಿಯುವ ಬೆಂಕಿಗೆ ತುಪ್ಪ ಸುರಿದಿದೆ. ವಿರೋಧ ಪಕ್ಷಗಳು ಮಸೂದೆಗೆ ತೀವ್ರ ವಿರೋಧ ವ್ಯಕ್ತಪಡಿಸುವ ಸಂದರ್ಭದಲ್ಲಿ ರಾಜ್ಯಸಭಾ ಟಿ.ವಿಯ ನೇರ ಪ್ರಸಾರವನ್ನೇ ದಿಢೀರೆಂದು ಸ್ಥಗಿತಗೊಳಿಸುವುದು, ಈಶಾನ್ಯ ರಾಜ್ಯಗಳಲ್ಲಿ ಮಸೂದೆ ವಿರೋಧಿ ಪ್ರತಿಭಟನೆ ಬಿರುಸುಗೊಳ್ಳುತ್ತಿದ್ದಂತೆಯೇ ಇಂಟರ್ನೆಟ್ ಸಂಪರ್ಕ ಕಡಿತಗೊಳಿಸುವಂತಹ ಕ್ರಮಗಳು ಪ್ರಜಾಪ್ರಭುತ್ವ ಸರ್ಕಾರಕ್ಕೆ ತಕ್ಕನಾದ ನಡವಳಿಕೆಗಳಲ್ಲ.

ಯಾವುದೇ ಅಕ್ರಮ ವಲಸಿಗರ ವಿರುದ್ಧ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದನ್ನು ಯಾರೂ ಬೇಡ ಎನ್ನಲಾರರು. ಅಷ್ಟಕ್ಕೂ ಅದು ಈಗಾಗಲೇ ಜಾರಿಯಲ್ಲಿರುವ ನಿರಂತರ ಪ್ರಕ್ರಿಯೆ. ಆದರೆ ಯಾವುದೋ ಒಂದು ಸಮುದಾಯವನ್ನು ಗುರಿಯಾಗಿಟ್ಟು ಇಂತಹ ಹೊಸ ಯೋಜನೆಗಳನ್ನು ಜಾರಿಗೆ ತಂದರೆ, ದೇಶದಲ್ಲಿ ಆ ಸಮುದಾಯದ ಜನಸಂಖ್ಯೆ ಹೆಚ್ಚಾಗುತ್ತಿದೆಯೆಂಬ ಆತಂಕದಲ್ಲಿ, ಬಹುಸಂಖ್ಯಾತರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ ಏಕೈಕ ರಹಸ್ಯ ಕಾರ್ಯಸೂಚಿ ಇದರ ಹಿಂದೆ ಇರಬಹುದೇನೋ ಎಂಬ ಅನುಮಾನ ನಾಗರಿಕರನ್ನು ಕಾಡದೇ ಇರದು.

ಮುಸ್ಲಿಮೇತರ ವಲಸಿಗರನ್ನು ಓಲೈಸುವ ಭರದಲ್ಲಿ, ಅವರಿಂದ ಸೃಷ್ಟಿ ಯಾಗಬಹುದಾದ ಸಮಸ್ಯೆಗಳ ಹೊಣೆಯನ್ನೂ ಸರ್ಕಾರವೇ ಹೊರಬೇಕಾಗುತ್ತದೆ. ಅದರ ಬದಲು, ಅಂತರರಾಷ್ಟ್ರೀಯವಾಗಿ ಸಂಧಾನ ಮಾತುಕತೆ, ಒತ್ತಡ ತಂತ್ರಗಳ ಮೂಲಕ, ಅವರು ಈವರೆಗೆ ಇದ್ದ ದೇಶಗಳಲ್ಲೇ ಕಿರುಕುಳಮುಕ್ತರಾಗಿ ಬದುಕಲು ಸಾಧ್ಯವಾಗುವಂತೆ ನೋಡಿಕೊಳ್ಳುವುದು ರಾಜತಾಂತ್ರಿಕವಾಗಿ ಸಮಯೋಚಿತ ನಡೆಯಾಗುತ್ತದೆ. ■